ಉ) ನಿವೇಶನದ ಲಭ್ಯತೆ ಹಾಗೂ ಆಯವ್ಯಯದಲ್ಲಿ ಒದಗಿಸಿದ ಅನುದಾನದ ಲಭ್ಯತೆಯನ್ನನುಸರಿಸಿ ಈ ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸಿ ಒದಗಿಸಲಾಗುವುದು.

2062 (2536) ಶ್ರೀ ಶಿವಾನಂದ ಎಸ್.ಪಾಟೀಲ್ (ಬಸವನ ಬಾಗೇವಾಡಿ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ವರ್ಷ ಚಿಕೂನ್‌ಗೂನ್ಯ ರೋಗದಿಂದ ಎಷ್ಟು ಜನರು ಸಾವನ್ನಪ್ಪಿದ್ದಾರೆ; (ಜಿಲ್ಲಾವಾರು ಮಾಹಿತಿ ನೀಡಿವುದು);

ಆ) ಎಷ್ಟು ಜನರು ಈ ರೋಗಕ್ಕೆ ತುತ್ತಾಗಿದ್ದರು; (ಜಿಲ್ಲಾವಾರು ಮಾಹಿತಿ ನೀಡುವುದು);

ಇ) ಇದಕ್ಕಾಗಿ ಸರ್ಕಾರ ಖರ್ಚು ಮಾಡಿರುವ ಹಣವೆಷ್ಟು;

ಈ) ಈ ವರ್ಷದ ಬೇಸಿಗೆಯಲ್ಲಿ ರೋಗವು ಹರಡದಂತಾಗಲು ಮುಂಜಾಗ್ರತಾ ಕ್ರಮವಾಗಿ ಸರ್ಕಾರವು ಕೈಗೊಂಡಿರುವ ಕ್ರಮವೇನು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ರಾಜ್ಯದಲ್ಲಿ ಚಿಕೂನ್‌ಗೂನ್ಯ ರೋಗದಿಂದ ಯಾವುದೇ ಮರಣ ಸಂಭವಿಸಿರುವುದಿಲ್ಲ.

ಆ) 7,62,026 ಜನರು ಸಂಶಯಾಸ್ಪದ ಚಿಕುಂಗುನ್ಯ ರೋಗಕ್ಕೆ ತುತ್ತಾಗಿದ್ದಾರೆ. (ಜಿಲ್ಲಾವಾರು ವಿವರವನ್ನು ಅನುಬಂಧ–1 ರಲ್ಲಿ ನೀಡಲಾಗಿದೆ)

ಇ) ಚಿಕೂನ್‌ಗುನ್ಯ ರೋಗ ನಿಯಂತ್ರಣ ಚಟುವಟಿಕೆಗಳಿಗಾಗಿ 2006–07ನೇ ಸಾಲಿನಲ್ಲಿ ರಾಜ್ಯವಲಯದಿಂದ ರೂ.1277 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ.

ಈ) 2007ನೇ ಸಾಲಿನಲ್ಲಿ ಚಿಕೂನ್‌ಗುನ್ಯ ಹಾಗೂ ಇತರೆ ವೈರಾಣು ರೋಗ ಸಂಬಂಧ ಕಾಯಿಲೆಗಳ ತಡೆಗಟ್ಟುವಿಕೆಗಾಗಿ ಈ ಕೆಳಕಂಡ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ರೋಗ ಸಮೀಕ್ಷೆ ಕಾರ್ಯಗಳನ್ನು ತ್ವರಿತಗೊಳಿಸಲಾಗಿದೆ.

2. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಇತರ ಇಲಾಖಾಧಿಕಾರಿಗಳ ಸಮನ್ವಯ ಸಮಿತಿಯನ್ನು ಕ್ರಮವಾಗಿ ಜಿಲ್ಲಾಧಿಕಾರಿಗಳ ಹಾಗೂ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ

ರಚಿಸಿ, ಸಭೆಗಳನ್ನು ಕರೆದು, ಪರಿಸ್ಥಿತಿಯ ಪರಿವೀಕ್ಷಣೆ, ಅಧ್ಯಯನ ಹಾಗೂ ಕಾರ್ಯತಂತ್ರ ರೂಪು ರೇಶೆಗಳನ್ನು ಯೋಜಿಸಿ, ಅನುಷ್ಠಾನಗೊಳಿಸಲಾಗುತ್ತಿದೆ.

3. ರಾಜ್ಯ ಮಟ್ಟದಲ್ಲಿ ಎಲ್ಲಾ ಜಿಲ್ಲಾ ಮಲೇರಿಯಾಧಿಕಾರಿಗಳು ಮತ್ತು ವಲಯ ಉಪನಿರ್ದೇಶಕರುಗಳ ಸಭೆಯನ್ನು ದಿ: 10-03-2007 ರಂದು ನಿರ್ದೇಶಕರು, ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮ, ದೆಹಲಿ ಇವರ ಅಧ್ಯಕ್ಷತೆಯಲ್ಲಿ ನಡೆಸಿ ಕೈಗೊಳ್ಳಬೇಕಾದ ರೋಗ ನಿಯಂತ್ರಣಗಳ ಚಟುವಟಿಕೆಗಳ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಲಾಗಿದೆ.

4. ಎಲ್ಲಾ ಜಿಲ್ಲಾ ಕೀಟಶಾಸ್ತ್ರಜ್ಞರುಗಳಿಗೆ ಕಾವಲು ಸಮೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡಿಕೊಂಡು ರೋಗವಾಹಕ ಸೊಳ್ಳೆಗಳ ಸಮೀಕ್ಷೆ ಮಾಡಲು ಸೂಚಿಸಲಾಗಿದೆ.

5. ರೋಗ ಪತ್ತೆ ಮತ್ತು ಶೀಘ್ರ ತಪಾಸಣೆಗಾಗಿ ಅನುಕೂಲವಾಗುವಂತೆ ರಾಜ್ಯದಲ್ಲಿ ಆರು ಕಾವಲು ಸಮೀಕ್ಷಾ ಕೇಂದ್ರಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗಿದೆ.

6. ಸ್ವಯಂ ರಕ್ಷಣಾ ವಿಧಾನಗಳ ಅನುಸರಣೆ, ಪರಿಸರ ನೈರ್ಮಲ್ಯ, ನೀರು ಶೇಖರಣಾ ವಿಧಾನಗಳಲ್ಲಿ ಸೂಕ್ತ ಮಾರ್ಪಾಡುಗಳು, ಕುಡಿಯುವ ನೀರಿನ ಸೂಕ್ತ ನಿರ್ವಹಣೆ, ಇವೇ ಮೊದಲಾದ ಕ್ರಮಗಳನ್ನು ಕೈಗೊಳ್ಳಲು ಜನರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

7. ಧೂಮೀಕರಣ ಮಾಡಲು ಅವಶ್ಯವಾದ ಕೀಟನಾಶಕ ಪೈರಥ್ರಮ್ ಹಾಗೂ ಲಾರ್ವಾನಿಯಂತ್ರಣಕ್ಕಾಗಿ ಟೆಮಿಪಾಸ್ ಅನ್ನು ಜಿಲ್ಲೆಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಸರಬರಾಜು ಮಾಡಲಾಗಿದೆ.

8. ಒಟ್ಟಾರೆ ಸೊಳ್ಳೆಗಳಿಂದ ಹರಡಬಹುದಾದ ರೋಗಗಳ ನಿಯಂತ್ರಣಕ್ಕೆ ಸೂಕ್ತ ಮೇಲ್ವಿಚಾರಣೆ ನಡೆಸಲು ಮಾರ್ಗದರ್ಶನವನ್ನು ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ನೀಡಲಾಗಿದೆ.

ಅನುಬಂಧ – 1 (ಎಲ್.ಎ.ಕ್ಯೂ.2536)

ಕರ್ನಾಟಕ ರಾಜ್ಯದ ಚಿಕುಂಗುನ್ಯ ಜ್ವರಪ್ರಕರಣಗಳ ವಿವರ : 2006

ಕ್ರ.ಸಂ	ಜಿಲ್ಲೆಗಳು	ಸಂಶಯಾಸ್ಪದ ಪ್ರಕರಣಗಳು	ಸಂಗ್ರಹಿಸಲಾದ ರಕ್ತಮಾದರಿಗಳು	ಪ್ರಕರಣಗಳು	
				ಖಚಿತ	ಮರಣಗಳು
1	ಬೆಂಗಳೂರು(ಗ್ರಾ)	83871	268	35	0
2	ಬೆಂಗಳೂರು(ನ)	11117	62	38	0
3	ಬೀದರ್	43737	174	65	0
4	ಕೋಲಾರ	40095	98	15	0
5	ಗದಗ	29964	25	5	0
6	ಬಾಗಲಕೋಟೆ	46692	509	5	0
7	ಶಿವಮೊಗ್ಗ	23964	260	7	0
8	ದಾವಣಗೆರೆ	44032	243	2	0
9	ಬಿಜಾಪುರ	93783	122	4	0
10	ಚಿತ್ರದುರ್ಗ	31729	131	10	0
11	ರಾಯಚೂರು	25854	169	13	0
12	ಬಳ್ಳಾರಿ	39424	348	11	0
13	ತುಮಕೂರು	43657	312	20	0
14	ಗುಲ್ಬರ್ಗಾ	81863	488	10	0
15	ಹಾವೇರಿ	20716	92	10	0
16	ಬೆಳಗಾವಿ	5807	171	5	0
17	ಧಾರವಾಡ	37568	91	3	0
18	ಹಾಸನ	3662	385	11	0
19	ಉತ್ತರ ಕನ್ನಡ	764	74	6	0
20	ಚಿಕ್ಕಮಗಳೂರು	17316	401	3	0

21	ಕೊಪ್ಪಳ	15246	174	5	0
22	ದಕ್ಷಿಣ ಕನ್ನಡ	47	37	4	0
23	ಮಂಡ್ಯ	13982	134	1	0
24	ಮೈಸೂರು	2834	167	9	0
25	ಚಾಮರಾಜನಗರ	4246	51	2	0
26	ಉಡುಪಿ	16	10	2	0
27	ಕೊಡಗು	4	4	4	0
	ಬೆಂಗಳೂರು ಮಹಾನಗರ ಪಾಲಿಕೆ	36	0	0	0
	Total	**762026**	**5000**	**305**	**0**

2063 (2471) ಡಾ॥ ಮಹದೇವಪ್ಪ.ಹೆಚ್.ಪಿ. :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಎಲ್ಲಾ ಇಲಾಖೆಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲಾಗಿದೆಯೇ;

ಆ) ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು;

ಇ) ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಈ) ಹಾಗಿದ್ದಲ್ಲಿ, ಯಾವಾಗ ಭರ್ತಿ ಮಾಡಲಾಗುವುದು (ವಿವರ ಒದಗಿಸುವುದು)?

ಶ್ರೀ ಬಾಲಚಂದ್ರ.ಲ.ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) :

ಅ) ರಾಜ್ಯದ ಎಲ್ಲಾ 69 ಇಲಾಖೆಗಳಲ್ಲಿರುವ 13138 ಬ್ಯಾಕ್‌ಲಾಗ್ ಹುದ್ದೆಗಳಲ್ಲಿ, 10975 ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಪ್ರಕಟಣೆ ನೀಡಲಾಗಿದೆ. ಈ ಪೈಕಿ 10255 ಬ್ಯಾಕ್‌ಲಾಗ್ ಹುದ್ದೆಗಳು ಭರ್ತಿಯಾಗಿವೆ. ಭರ್ತಿ ಆಗದೇ ಉಳಿದಿರುವ 2163 ಬ್ಯಾಕ್‌ಲಾಗ್ ಹುದ್ದೆಗಳಲ್ಲಿ, 2150 ಬ್ಯಾಕ್‌ಲಾಗ್ ಹುದ್ದೆಗಳಿಗೆ ಸಂಬಂಧಪಟ್ಟ ಇಲಾಖೆಗಳಲ್ಲಿ ಹುದ್ದೆಗಳು ಖಾಲಿ ಇಲ್ಲದಿರುವ ಪ್ರಯುಕ್ತ ಮುಂದೆ ತುಂಬಲಾಗುವ ಹುದ್ದೆಗಳೆಂದು ವರ್ಗೀಕರಿಸಲಾಗಿದೆ. ಇನ್ನೂ 13 ಹುದ್ದೆಗಳನ್ನು ಭರ್ತಿ ಮಾಡಲು ಪ್ರಕಟಣೆ ನೀಡಬೇಕಾಗಿದೆ.